# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಭಾಷಾಂತರ ಕೇಂದ್ರ** ಮತ್ತು

**ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ವು** ಜಂಟಿಯಾಗಿ ಆಯೋಜಿಸಿದ್ದ

## ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟ –22.3.2024



ಖ್ಯಾತ ಭಾಷಾಂತರಕಾರರು ಹಾಗೂ ವಿಮರ್ಶಕರಾದ **ಡಾ. ಜನಾರ್ದನ್ ಭಟ್**, ಕಾರ್ಕಳ ಅವರು ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟದ ಉದ್ಘಾಟನೆಯನ್ನು ನೆರವೇರಿಸಿದರು

'ವಿದ್ಯಾರ್ಥಿಗಳಿಗೆ ಭಾಷಾಂತರವನ್ನು ಪಠ್ಯಕ್ರಮವಾಗಿ ರೂಪಿಸಬೇಕಾಗಿದೆ. ಭಾಷೆ–ಭಾಷೆಗಳ ನಡುವೆ ಸಾಂಸ್ಕೃತಿಕ ಕೊಡು–ಕೊಳ್ಳುವಿಕೆ ನಡೆದಿದೆ. ಭಾಷಾಂತರವನ್ನು ಉನ್ನತ ಶಿಕ್ಷಣದಲ್ಲಿ ಪಠ್ಯವಾಗಿ ಪರಿಚಯಿಸಿದಂತಹ ಮೊಟ್ಟಮೊದಲ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯವಾಗಿದೆ' ಎಂದು ಭಾಷಾಂತರ ಕೇಂದ್ರ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ವು ಜಂಟಿಯಾಗಿ ಆಯೋಜಿಸಿದ್ದ ಮೂರು ದಿನಗಳ ಭಾಷಾಂತರ ತರಬೇತಿ ಕಮ್ಮಟದ ಉದ್ಘಾಟನೆಯನ್ನು ನೆರವೇರಿಸಿದ ಖ್ಯಾತ ಭಾಷಾಂತರಕಾರರು ಹಾಗೂ ವಿಮರ್ಶಕರಾದ **ಡಾ. ಜನಾರ್ದನ್ ಭಟ್**, ಕಾರ್ಕಳ ಅವರು ಮಾತನಾಡುತ್ತಿದ್ದರು. ಮುಂದುವರೆದು, ಅವರು ಭಾಷಾಂತರಕಾರರ ಸಮ್ಮೇಳನಗಳ ಮೂಲಕ ಮಾರ್ಗದರ್ಶನಗಳನ್ನು ಪಡೆದಿರುವುದಾಗಿ ಹಾಗೂ ಅನುವಾದವೆಂಬುದು ಬಹಳ ದೊಡ್ಡ ಆದಾಯ ಬರುವ ಉದ್ಯೋಗವೂ ಆಗಿದೆ ಎಂದು ಹೇಳಿದರು.





ಸಮಾಜ ವಿಜ್ಞಾನ ನಿಕಾಯದ ಡೀನ್‌ರಾದ **ಡಾ. ಚಲುವರಾಜು** ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು

ಸಮಾಜ ವಿಜ್ಞಾನ ನಿಕಾಯದ ಡೀನ್‌ರಾದ **ಡಾ. ಚಲುವರಾಜು** ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಇಂತಹ ಕಮ್ಮಟಗಳಲ್ಲಿ ಭಾಗವಹಿಸುವ ಅವಕಾಶಗಳು ಲಭ್ಯವಾಗಿರುವುದು ಇಂದಿನ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ನಾಂದಿಯಾಗಲಿದೆ. ಪ್ರವಾಸೋದ್ಯಮ ತಾಣವಾದ ಹಂಪಿಯಂತಹ ಸ್ಥಳಗಳಲ್ಲಿ ಬರುವ ದೇಶ–ವಿದೇಶಗಳ ಪ್ರವಾಸಿಗರೊಂದಿಗೆ ಸ್ಥಳೀಯ ಅನಕ್ಷರಸ್ಥ ಜನರೂ ಸಹ ದಿನನಿತ್ಯದ ವಹಿವಾಟುಗಳಿಗಾಗಿ ಬೇರೆ ಬೇರೆ ಭಾಷಿಕರೊಂದಿಗೆ ವ್ಯವಹರಿಸುವುದನ್ನು ಗಮನಿಸಿದರೆ ಭಾಷಾಂತರದ ವ್ಯಾಪ್ತಿ ಎಷ್ಟಿದೆ ಎಂಬುದು ಅರ್ಥವಾಗುತ್ತದೆ ಎಂದು ಹೇಳಿದರು.



ಐಕ್ಯುಎಸಿ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಅವರು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಮ್ಮಟದ ನಿರ್ದೇಶಕರಾದ **ಡಾ. ಎ. ಮೋಹನ ಕುಂಟಾರ್** ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ ಭಾಷಾಂತರ ಕಮ್ಮಟದ ಔಚಿತ್ಯವನ್ನು ವಿವರಿಸಿ ಕಮ್ಮಟದ ರೂಪುರೇಷೆಗಳನ್ನು ತಿಳಿಸಿದರು. ಮೂರು ದಿನಗಳು ನಡೆಯುವ ಕಮ್ಮಟದಲ್ಲಿ ಸಂಪನ್ಮೂಲ ವಿದ್ವಾಂಸರಾಗಿ ಜನಾರ್ದನ್ ಭಟ್, ಡಾ. ಎ. ಮೋಹನ ಕುಂಟಾರ್ ಮತ್ತು ಶ್ರೀಮತಿ ದೀಪಾ ಬಗಾಡೆ ಭಾಗವಹಿಸಿದ್ದರು.










ಭಾಷಾಂತರ ಕೇಂದ್ರ
ಮತ್ತು
ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯುಎಸಿ)
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬
ಜಂಟಿಯಾಗಿ ಆಯೋಜಿಸಿರುವ
ಮೂರು ದಿನಗಳ (ಮಾರ್ಚ್ ೨೨, ೨೩ ಮತ್ತು ೨೪) ಭಾಷಾಂತರ ತರಬೇತಿ ಕಮ್ಮಟ

**ಉದ್ಘಾಟನಾ ಸಮಾರಂಭ**

ದಿನಾಂಕ : ೨೨.೦೩.೨೦೨೪ ಶುಕ್ರವಾರ ಬೆಳಿಗ್ಗೆ ೧೧.೩೦
ಸ್ಥಳ: ನುಡಿ ಕಟ್ಟಡ

ಅಧ್ಯಕ್ಷತೆ : ಡಾ. ಡಿ.ವಿ. ಪರಮಶಿವಮೂರ್ತಿ
ಮಾನ್ಯ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಉದ್ಘಾಟನೆ : ಡಾ. ಜನಾರ್ದನ್‌ಭಟ್
ಖ್ಯಾತ ಭಾಷಾಂತರಕಾರರು ಹಾಗೂ ವಿಮರ್ಶಕರು, ಕಾರ್ಕಳ

ಸಂಪನ್ಮೂಲ ವಿದ್ವಾಂಸರು
೧. ಡಾ. ಜನಾರ್ದನ್‌ಭಟ್, ಕಾರ್ಕಳ
೨. ಡಾ. ವಿಠಲರಾವ್ ಗಾಯಕ್ವಾಡ್, ಹೊಸಪೇಟೆ
೩. ಡಾ. ಎ. ಮೋಹನ ಕುಂಟಾರ್, ಕನ್ನಡ ವಿಶ್ವವಿದ್ಯಾಲಯ, ಹಂಪಿ
೪. ಶ್ರೀಮತಿ ದೀಪಾ ಬಗಾಡೆ, ಹಾವೇರಿ

**ತಮಗೆ ಸ್ವಾಗತ**

ಡಾ. ಎ. ಮೋಹನ ಕುಂಟಾರ್
ನಿರ್ದೇಶಕರು, ಭಾಷಾಂತರ ಕೇಂದ್ರ ಮತ್ತು ಐಕ್ಯುಎಸಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಡಾ. ವಿಜಯ್ ಪೂಣಚ್ಚ ತಂಬಂಡ
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀಮತಿ ಡಿ. ಪ್ರಭಾ
ಸಹಾಯಕ ನಿರ್ದೇಶಕರು, ಐಕ್ಯುಎಸಿ
ಕಮ್ಮಟದ ಸಂಚಾಲಕರು

ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯುಎಸಿ)ದ ಸಹಾಯಕ ನಿರ್ದೇಶಕರು ಹಾಗೂ ಕಮ್ಮಟದ ಸಂಚಾಲಕರಾದ ಶ್ರೀಮತಿ ಡಿ. ಪ್ರಭಾ ಅವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ವಿಶ್ವವಿದ್ಯಾಲಯದ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಕಮ್ಮಟಾರ್ಥಿಗಳು ಭಾಗವಹಿಸಿದ್ದರು.